ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.

ಸಿ.ಸಿ. 983/2022

| | | |
|---|---|---|
| ಸಾಕ್ಷಿದಾರರ ಹೆಸರುಃ | ರಂಗಾಬೋವಿ | ಪ್ರಮಾಣ ವಚನ ಭೋದಿಸಿದ ದಿನಾಂಕಃ<br>01-02-2024 |
| ತಂದೆಯ/ಗಂಡನ ಹೆಸರುಃ | ವೆಂಕಟಾಬೋವಿ | ಸಿ.ಡಬ್ಲ್ಯೂಃ3 |
| ವಯಸ್ಸುಃ | 45 ವರ್ಷ | ಪಿ.ಡಬ್ಲ್ಯೂಃ6 |
| ಉದ್ಯೋಗಃ | ಕಂಡಕ್ಟರ್ ಕೆ ಎಸ್ ಆರ್ ಟಿ ಸಿ | |
| ವಾಸಸ್ಥಳಃ | ಕಾಳೇನಹಳ್ಳಿ, ಅರಸೀಕೆರೆ ತಾಲ್ಲೂಕು | |

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ನನಗೆ ಆರೋಪಿ ಪರಿಚಯ ಇದ್ದು ಅವರು ನಮ್ಮ ಕೆ ಎಸ್ ಆರ್ ಟಿ ಸಿ ಬಸ್ ನ ಚಾಲಕರಾಗಿರುತ್ತಾರೆ . ನನಗೆ ಚಾಸಾ-1, 11, 12 ರವರ ಪರಿಚಯ ಇಲ್ಲ. ದಿಃ 23-07-2022 ರಲ್ಲಿ ನಾನು ಕಂಡಕ್ಟರ್ ಆಗಿ ನಿರ್ವಾಹಣೆ ಮಾಡುತಿದ್ದ ನಮ್ಮ ಕೆ ಎಸ್ ಆರ್ ಟಿ ಸಿ ಬಸ್ ಚಿತ್ರದುರ್ಗ ದಿಂದ ಅರಸೀಕರೆಗೆ ಹೋಗುತ್ತಿತ್ತು ಆಗ ಸದರಿ ಬಸ್ ನ ಚಾಲಕನಾಗಿ ನ್ಯಾಯಾಲಯದ ಮುಂದಿರುವ ಆರೋಪಿ ಬಸ್ ಚಲಾಯಿಸುತಿದ್ದರು. ಸಂಜೆ 5.30 ರ ಸಮಯದಲ್ಲಿ ಹೊಳಲ್ಕೆರೆ ಯಿಂದ ಮುಂದೆ ಹೊಸದುರ್ಗ ರಸ್ತೆಯಲ್ಲಿ ನಮ್ಮ ಬಸ್ಸು ನಿದಾನವಾಗಿ ಬಸ್ಸನ್ನು ಜಾಗರೂಕತೆಯಿಂದ ನಮ್ಮ ಚಾಲಕ ಚಲಾಯಿಸಿಕೊಂಡು ಹೋಗುತಿದ್ದು ಬಸ್ ನ ಚಾಲಕ ಸೂಚನೆ ಕೊಡುತ್ತಾ ಹೋಗುತಿದ್ದು ಬಸ್ ಪಾಸಾದ ನಂತರ ಯಾರೋ ಪ್ಯಾಸೆಂಜರ್ ಯಾವುದೋ ಗಾಡಿ ಹಿಂದೆ ಪಲ್ಟಿ ಆಯಿತು ಎಂದು ಹೇಳಿದಾಗ ನಮ್ಮ ಬಸ್ಸನ್ನು ನಿಲ್ಲಿಸಿ ಹೋಗಿ ನೋಡಲಾಗಿ ಒಂದು ಆಟೋ ರಿಕ್ಷಾ ಪಲ್ಟಿಯಾಗಿತ್ತು ಆಟೊ ರಿಕ್ಷ ನಂಬರ ನೋಡಲಾಗಲಿಲ್ಲ, ಒಬ್ಬರು ವಯಸ್ಸಾದ ವ್ಯಕ್ತಿ ಆಟೋ ಚಾಲಕ ಇಬ್ಬರು ಇದ್ದರು. ಅವರ ಪೈಕಿ ವಯಸ್ಸಾದ ವ್ಯಕ್ತಿಗೆ ಕಾಲಿಗೆ ಸಣ್ಣ ಗಾಯವಾಗಿತ್ತು. ಯಾವ ಕಾರಣಕ್ಕೆ ಆಟೋ ರಿಕ್ಷ ಪಲ್ಟಿ ಆಗಿತ್ತು ಎಂದು ನನಗೆ ಗೊತ್ತಿಲ್ಲ ಒಟ್ಟಾರೆ ನಮ್ಮ ಬಸ್ಸಿನ ಚಾಲಕ ಆರೋಪಿ ಯಾವುದೇ ನಿರ್ಲಕ್ಷ ವಹಿಸಿಲ್ಲ ಇದೇ ಸಂಗತಿಯನ್ನು ಪೊಲೀಸರಿಗೆ ತಿಳಿದ್ದೇನೆ .

(ಈ ಹಂತದಲ್ಲಿ ಬಾಗಶಃ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ನಾನು ಮೇಲೆ ಹೇಳಿದ ದಿನಾಂಕದಂದು ನಮ್ಮ ಬಸ್ಸಿನ ಚಾಲಕ ತನ್ನ ಬಸ್ಸನ್ನು ಅತಿವೇಗ

ಮತ್ತು ಅಜಾಗುರೂಕತೆಯಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವಂತೆ ಚಾಲನೆ ಮಾಡಿಕೊಂಡು ಹೋಗುತಿದ್ದು ಆಟೋ ರಿಕ್ಷಾ ನೊಂದಣಿ ಸಂಖ್ಯೆ ಕೆಎ –16 ಬಿ –2507 ನೇದಕ್ಕೆ ಡಿಕ್ಕಿಪಡಿಸಿ ಬಸ್ಸನ್ನು ಸ್ವಲ್ಪ ದೂರ ಹೋಗಿ ನಿಲ್ಲಿಸಿದರು ಎಂದರೆ ಸರಿಯಲ್ಲ. ಆ ಕಾರಣಕ್ಕೆ ಬಸ್ಸಿನಲ್ಲಿದ್ದ ವ್ಯಕ್ತಿಗಳಿಗೆ ಗಾಯವಾಗಿದ್ದು ಅವರನ್ನು ನೋಡಿಯೂ ಸಹ ಊರಿಗೆ ಬಸ್ಸು ತೆಗೆದುಕೊಂಡು ಹೋಗುವುದು ತಡವಾಗುತ್ತದೆ ಎಂದು ಹೇಳಿ ಅವರನ್ನು ಉಪಚರಿಸದೆ ಬಸ್ ನಲ್ಲಿ ಹೊರಟು ಹೋದೆವು ಎಂದರೆ ಸರಿಯಲ್ಲ. ಅಲ್ಲಿ ಆಟೋ ಚಾಲನೆ ಮಾಡುತಿದ್ದ ವ್ಯಕ್ತಿಯ ಹೆಸರು ರುದ್ರಮುನಿ ಈತನಿಗೆ ಎಡಗೈ ಮೊಣಕೈಗೆ ಪೆಟ್ಟು ಸಾಮಾನ್ಯ ಸ್ವರೂಪದ ಪೆಟ್ಟು ಬಿದ್ದಿರುತ್ತದೆ ಶಿವು ಮುಸ್ಟೂರು ಗ್ರಾಮ ಜಗಳೂರು ತಾಲ್ಲೂಕು ಎಂದು ಗೊತ್ತಾಗಿದ್ದು ಆತನ ಗದ್ದಕ್ಕೆ ಬಲಗೈ ಮೊಣಕೈಗೆ ಎಡಗೈ ಮಣಿಕಟ್ಟಿಗೆ ಸಾಮಾನ್ಯ ಸ್ವರೂಪದ ಪೆಟ್ಟಾಗಿದ್ದವು ಎಂದರೆ ಸರಿಯಲ್ಲ. ಹಾಗೂ ಲಕ್ಷ್ಮಣ ಚಿಕ್ಕಹಳ್ಳಿ ಗ್ರಾಮ ರಾಣಿ ಬೆನ್ನೂರು ತಾಲ್ಲೂಕು ಇವರಿಗೂ ಸಹ ಸಾಮಾನ್ಯ ಸ್ವರೂಪದ ಗಾಯಗಳು ಆಗಿದ್ದವು ಎಂದರೆ ಸರಿಯಲ್ಲ. ಈ ಎಲ್ಲಾ ಸಂಗತಿಗಳನ್ನು ದಿಃ 25–07–2022 ರಂದು ತನಿಖಾದಿಕಾರಿಗೆ ಹೇಳಿಕೆ ಮುಖಾಂತರ ಹೇಳಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಬಾಗವನ್ನು ಸಾಕ್ಷಿ ಸಂಪೂರ್ಣ ಅಲ್ಲಗಳೆದಿದ್ದರಿಂದ ಸದರಿ ಹೇಳಿಕೆಯ ಬಾಗವನ್ನು "ಅಂದರೆ ಎನ್ ಹೆಚ್ ರಸ್ತೆಯಲ್ಲಿ ––– ಅಂತ ನನ್ನ ಹೇಳಿಕೆ ನೀಡಿರುತ್ತೇನೆ ಎಂಬ ಬಾಗವನ್ನು" ನಿಪಿ–12 ಎಂದು ಗುರುತಿಸಲಾಯಿತು ನಾನು ಆ ರೀತಿ ಹೇಳಿಕೆ ನೀಡಿದ್ದರೂ ಸಹ ನಾನು ಮತ್ತು ಆರೋಪಿ ಸಹೋದ್ಯೋಗಿಯಾಗಿದ್ದರಿಂದ ಆತನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ನಿರ್ಲಕ್ಷತನದಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಮತ್ತು ಆ ಕಾರಣಕ್ಕೆ ಆಟೊ ರಿಕ್ಷಾದಲ್ಲಿದ್ದ ಮೇಲೆ ಸೂಚಿಸಿದ ವ್ಯಕ್ತಿಗಳಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿವೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–ಇಲ್ಲ ಎಂದು ನುಡಿಯುತ್ತಾರೆ</u>**

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ತಕ್ಕಂತ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಹೊಳಲ್ಕೆರೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.

ಸಿ.ಸಿ. 983/2022

| | | |
|---|---|---|
| ಸಾಕ್ಷಿದಾರರ ಹೆಸರುಃ | ಹರಳಪ್ಪ | ಪ್ರಮಾಣ ವಚನ ಭೋದಿಸಿದ ದಿನಾಂಕಃ |
| | | 01-02-2024 |
| ತಂದೆಯ/ಗಂಡನ ಹೆಸರುಃ | ತಿಮ್ಮಪ್ಪ | ಸಿ.ಡಬ್ಲ್ಯೂಃ6 |
| ವಯಸ್ಸುಃ | 35 ವರ್ಷ | ಪಿ.ಡಬ್ಲ್ಯೂಃ7 |
| ಉದ್ಯೋಗಃ | ಸ್ಕಾವೆಂಜರ್ | |
| ವಾಸಸ್ಥಳಃ | ತಿರುಮಲಾಪುರ . | |

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ನನಗೆ ಆರೋಪಿ ಪರಿಚಯ ಇದೆ ಅವರು ಕೆ ಎಸ್ ಆರ್ ಟಿ ಸಿ ಬಸ್ ಡ್ರೈವರ್ , ಚಾಸಾ-1 ಮತ್ತು 7 ರವರ ಪರಿಚಯ ಇಲ್ಲ.ವಾಹನ ತಡೆ ಹಿಡಿದ ಪಂಚನಾಮೆ ದಾಖಲೆಯನ್ನು ತೋರಿಸಿದ್ದು ತನ್ನ ಸಹಿಯನ್ನು ಗುರುತಿಸಿದ ಕಾರಣ ದಾಖಲೆಯನ್ನು ನಿಪಿಃ11, ಸಾಕ್ಷಿಯ ಎಡಗೈನ ಹೆಬ್ಬಟ್ಟಿನ ಗುರುತನ್ನು ನಿಪಿಃ11 ಎ ಎಂದು ಗುರುತಿಸಲಾಯಿತು. ನನ್ನ ಜೊತೆ ಬೇರೆ ಯಾರು ಸಹಿ ಮಾಡಿಲ್ಲ. ಸದರಿ ಸಹಿಯನ್ನು ಠಾಣೆಯಲ್ಲಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಅದನ್ನು ನನಗೆ ಓದಿ ಹೇಳಿಲ್ಲ. ನನ್ನ ಸಮಕ್ಷಮ ಯಾವುದೇ ಬರವಣಿಗೆ ಆಗಿಲ್ಲ. ಯಾವುದೇ ಬಸ್ಸು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿಲ್ಲ. ಕೇವಲ ಸಹಿ ಮಾತ್ರ ಮಾಡಿರುತ್ತೇನೆ .

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ದಿಃ 22-07-2022 ರಂದು ಕೆ ಎಸ್ ಆರ್ ಟಿ ಸಿ ಬಸ್ ಸಂಖ್ಯೆ ಕೆಎ -18 ಎಫ್ -0791 ನೇದನ್ನು ತನಿಖಾದಿಕಾರಿ ಹೆಚ್ ಸಿ ಹೊಳಲ್ಕೆರೆ ಪಿಎಸ್ ರವರು ಮದ್ಯಾಹ 12.30 ರಿಂದ 1 ಗಂಟೆ ಸಮಯದಲ್ಲಿ ಪೊಲೀಸ್ ಠಾಣಾ ಆವರಣದಲ್ಲಿ ನಿಂತಿದ್ದ ಈ ಕೇಸಿನ ಅಪಘಾತ ಪಡಿಸಿದೆ ಎಂದು ಹೇಳುವ ಸದರಿ ಬಸ್ಸನ್ನು ಅಮಾನತ್ತು ಪಡಿಸಿಕೊಂಡು ಅದರ ವಿವರಗಳನ್ನು ನಮೂದಿಸಿ ಮುಂದಿನ ಕ್ರಮಕ್ಕಾಗಿ ವಶಕ್ಕೆ ಪಡೆದುಕೊಂಡು ಕೆ ಎಸ್ ಆರ್ ಟಿ ಸಿ ಸಂಸ್ಥೆಯ ಸಂಬಂದಪಟ್ಟ ಅದಿಕಾರಿಗೆ ಮುಚ್ಚಳಿಕೆ ಬರೆಸಿಕೊಂಡು ಬಿಡುಗಡೆ ಮಾಡುವ ಸಂಬಂದ ವಾಹನವನ್ನು

ತಡೆಹಿಡಿದರು ಎಂದರೆ ನನಗೆ ಗೊತ್ತಿಲ್ಲ ನಾನು ಮತ್ತು ಚಾಸಾ–7 ರಾಜಶೇಖರರವರು ಓದಿ ನೋಡಿಯೇ ನಿಪಿ–1 ಕ್ಕೆ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿಃಇಲ್ಲ ಎಂದು ನುಡಿಯುತ್ತಾರೆ .**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ತಕ್ಕಂತ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಹೊಳಲ್ಕೆರೆ